# ವಾರ್ಡ್ ಸಭೆ ಸಂಖ್ಯೆ.21

ದಿನಾಂಕ:06.11.2021 ರಂದು ಸಮಯ 11:00 ಗಂಟೆಗೆ ವಾರ್ಡ್.ಸಂಖ್ಯೆ.44 ಮಾರಪ್ಪನಪಾಳ್ಯ ವಾರ್ಡ್ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಮಾನ್ಯ ವಾರ್ಡ್ ಅಭಿಯಂತರರು (ಕಾರ್ಯದರ್ಶಿಗಳು) ಅಧ್ಯಕ್ಷತೆಯಲ್ಲಿ ಕರೆಯಲಾಯಿತು.

ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳು

1. ಶ್ರೀಮತಿ ರಾಜೇಶ್ವರಿ ಸಹಾಯಕ ಆಯುಕ್ತರು ಕಲ್ಯಾಣ **(ಅಧ್ಯಕ್ಷರು)**
2. ಶ್ರೀ. ಧನಂಜಯ ಜಿ.ಟಿ ಸಹಾಯಕ ಅಭಿಯಂತರರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ. **(ಕಾರ್ಯದರ್ಶಿ)**
3. ಶ್ರೀ ಜಯಪಾಲ್ ಸದಸ್ಯರು.
4. ಶ್ರೀ ವೈ.ಆರ್ ವೆಂಕಟೇಶ್ ಸದಸ್ಯರು.
5. ಶ್ರೀಮತಿ ಪ್ರೇಮ ಸದಸ್ಯರು.
6. ಕುಮಾರಿ ಕಮಲ ಸದಸ್ಯರು.
7. ಶ್ರೀ ರಾಜೇಶ್ ಸದಸ್ಯರು.
8. ಶ್ರೀ ಬಿ.ಆರ್ ಪುಟ್ಟಸ್ವಾಮಿ ಸದಸ್ಯರು.
9. ಶ್ರೀ ನಾಗೇಂದ್ರ ಸದಸ್ಯರು.
10. ಶ್ರೀ ಗೋಪಿ ಸದಸ್ಯರು.
11. ಶ್ರೀ ಛಾಯಾಪತಿ ಎಂ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
12. ಶ್ರೀ ಜಿ.ಕೆ ವೆಂಕಟೇಶಯ್ಯ ಕೆಲಸ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
13. ಶ್ರೀವಿಠಲ್ ಮೀಟರ್ ರೀಡರ್ (ಬಿ.ಡಬ್ಲ್ಯೂ.ಎಸ್.ಎಸ್.ಬಿ) ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
14. ಶ್ರೀ ದಿನೇಶ್ ಕುಮಾರ್ ಸಹಾಯಕ ಅಭಿಯಂತರರು (ಬೆಸ್ಕಾಂ) ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
15. ಶ್ರೀ ಬಿ.ಆರ್ ಮಂಜುನಾಥ್ ಕಂದಾಯ ವಸೂಲಿಗಾರರು ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
16. ಆರ್.ಎಂ.ಸಿ ಯಾರ್ಡ್ ಪೋಲೀಸ್ ಠಾಣೆ.
17. ಶ್ರೀ ದೀಪಕ್ ಗಣಕಯಂತ್ರ ನಿರ್ವಾಹಕರು, ಶಂಕರನಗರ ಪ್ರಾಥಮಿಕ ಆರೋಗ್ಯ ಕೇಂದ್ರ.

ಶ್ರೀ ಧನಂಜಯ ಜಿ.ಟಿ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು, ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಲಾಯಿತು.

| ಕ್ರ.ಸಂ | ವಿವರಣೆ | ಕ್ರಮ |
|---|---|---|
| 1. | ಕಾರ್ಯದರ್ಶಿಗಳು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ, ಅಧಿಕಾರಿಗಳಿಗೆ ಓದಿ ತಿಳಿಸಿದರು. | – |
| 2. | ಕಾರ್ಯದರ್ಶಿಗಳು ಸಾರ್ವಜನಿಕರ ಸಮಸ್ಯೆಗಳಿಗೆ ಮೊದಲ ಆದ್ಯತೆ ನೀಡಿ ಸಮಸ್ಯೆಯನ್ನು ತಿಳಿಸುವಂತೆ ಸಾರ್ವಜನಿಕರನ್ನು ಕೋರಿದರು. | – |
| 3. | ಲೂರ್ಡ್ ಶಾಲೆಯ ಶಿಕ್ಷಕರು ಚರಂಡಿ ನೀರು ಶಾಲೆಯ ಒಳಗೆ ಬರುತ್ತಿದೆ ಎಂದು ತಿಳಿಸಿದರು ಇದಕ್ಕೆ ಕಾರ್ಯದರ್ಶಿಗಳು ಸಮಸ್ಯೆಯನ್ನು ಪರಿಹರಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ ರವರಿಗೆ ಸೂಚಿಸುತ್ತೇವೆ ಎಂದು ತಿಳಿಸಿದರು. | |
| 4. | ಸದಸ್ಯರು ವ್ಯಾಕ್ಸಿನ್ ಬಗ್ಗೆ ಮಾಹಿತಿ ಕೋರಿದರು, ಇದಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ಶಂಕರನಗರಕ್ಕೆ ಸಂಬಂಧಿಸಿದವರು ಸಭೆಗೆ ಮಾಹಿತಿ ತಿಳಿಸಿದರು. | – |
| 5. | ಶ್ರೀ ನಾಗೇಂದ್ರ ಸದಸ್ಯರು ರವರು ಬೋರ್‌ವೆಲ್ ಪ್ಯಾನಲ್‌ಗಳ ದುರಸ್ಥಿ ಬಗ್ಗೆ ಕೇಳಿದರು. ಇದಕ್ಕೆ ಕಾರ್ಯದರ್ಶಿಗಳು ಸಂಬಂದಪಟ್ಟ ಇಲಾಖೆ ರವರಿಗೆ ನೋಟೀಸ್ ನೀಡಲಾಗಿರುತ್ತದೆ ಆದರೂ ಸಂಬಂದಪಟ್ಟವರು ಹಾಜರಾಗದ ಕಾರಣ ಸದರಿರವರ ಮೇಲಾಧಿಕಾರಿಗಳಿಗೆ ಸೂಚಿಸಲಾಗುವುದು ಎಂದು ತಿಳಿಸಿದರು. | ಬಿ.ಡಬ್ಲ್ಯೂ.ಎಸ್. ಎಸ್.ಬಿ ಇಲಾಖೆ, |
| 6. | ಶ್ರೀ ನಾಗೇಂದ್ರ ಸದಸ್ಯರು ರವರು ಬೀದಿ ದೀಪಗಳು, ಐ–ಮಾಸ್ಟ್ ಹಾಗೂ ಟೈಮರ್‌ಗಳನ್ನು ಅಳವಡಿಸುವ ಬಗ್ಗೆ ಕೇಳಿದರು. ಇದಕ್ಕೆ ಮಾನ್ಯ ಕಾರ್ಯದರ್ಶಿಗಳು ಸಂಬಂದಪಟ್ಟ ಇಲಾಖೆ | ಬೀದಿ ದೀಪಗಳ ನಿರ್ವಹಣೆ |

| | | |
|---|---|---|
| | ರವರು ಸಭೆಗೆ ಹಾಜರಿಲ್ಲದ ಕಾರಣ ಸಂಬಂಧಪಟ್ಟ ಅಧಿಕಾರಿರವರನ್ನು ದೂರವಾಣಿ ಮುಖಾಂತರ ಸಂಪರ್ಕಿಸಿದಾಗ ಮುಂದಿನ ಸಭೆಗೆ ಹಾಜರಾಗುತ್ತೇನೆ ಎಂದು ತಿಳಿಸಿದರು. | |
| 7. | ಶ್ರೀ ನಾಗೇಂದ್ರ ಸದಸ್ಯರು ರವರು ಕಿರಯ ೀರೋಗ್ಯ ಪರಿವೀಕ್ಷಕರಿಗೆ ವಾರ್ಡ್ ವ್ಯಾಪ್ತಿಯಲ್ಲಿ ಬ್ಲಾಕ್ ಸ್ಪಾಟ್ ಮಾಹಿತಿ ಕೇಳಿದರು, ಬ್ಲಾಕ್ ಸ್ಪಾಟ್ ಉತ್ಪತ್ತಿಯಾಗುವುದಕ್ಕೆ ಕಾರಣ ಹಾಗೂ ಬ್ಲಾಕ್ ಸ್ಪಾಟ್‌ಗನ್ನು ತೆರವುಗೊಳಿಸಲು ಕೋರಿದರು.ಇದಕ್ಕೆ ಕಿರಿಯ ಆರೋಗ್ಯ ಪರಿವೀಕ್ಷಕರು ಬ್ಲಾಕ್‌ಸ್ಪಾಟ್‌ಗಳ ಪಟ್ಟಿಯನ್ನು ಮುಂದಿನ ಸಭೆಯಲ್ಲಿ ನೀಡುತ್ತೇನೆ ಮತ್ತು ರಾತ್ರಿ 12:00 ಗಂಟೆಯ ನಂತರ ಸಾರ್ವಜನಿಕರು ಕಸವನ್ನು ತಂದು ಹಾಕುತ್ತಿರುತ್ತಾರೆ ಆದ್ದರಿಂದ ಬ್ಲಾಕ್‌ಸ್ಪಾಟ್‌ಗಳು ಉತ್ಪತ್ತಿಯಾಗುತ್ತಿರುತ್ತವೆ ಎಂದು ತಿಳಿಸಿದರು, ಇದಕ್ಕೆ ಕಾರ್ಯದರ್ಶಿಗಳು ಕೆಲವು ದಿನಗಳು ರಾತ್ರಿ 12:00 ನಂತರ ಮಾರ್ಷಲ್‌ರವರನ್ನು ಬ್ಲಾಕ್‌ಸ್ಪಾಟ್ ಸ್ಥಳಗಳಲ್ಲಿ ಕಾವಲು ಇರಲು ಸೂಚಿಸುವಂತೆ ತಿಳಿಸಿದರು. | ಕಿರಿಯ ಆರೋಗ್ಯ ಪರಿವೀಕ್ಷಕರು |
| 8. | ಸಭೆಯಲ್ಲಿ ಹಾಜರಿದ್ದ ಸದಸ್ಯರು ಶ್ರೀ ಸೋಮನಾಥ್ ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ವಿಜಯಾನಂದನಗರದ ಒಳಚರಂಡಿ ವ್ಯವಸ್ಥೆಯ ಸರ್ವೆ ರಿಪೋರ್ಟ್ 3 ದಿನಗಳೊಳಗೆ ನೀಡಲಾಗುವುದು ಎಂದು ಹಿಂದನ ಸಭೆಯಲ್ಲಿ ತಿಳಿಸಿರುತ್ತಾರೆ ಆದರೂ ಸಹ ಇನ್ನೂ ನೀಡಿರುವಿದಿಲ್ಲ ಎಂದು ತಿಳಿಸಿದರು. ಸದರಿ ಸಭೆಯಲ್ಲಿ ಸಂಬಂಧಪಟ್ಟ ಅಧಿಕಾರಿರವರು ಹಾಜರಿಲ್ಲದ ಕಾರಣ ಕಾರ್ಯದರ್ಶಿಗಳು ದೂರವಾಣಿ ಮುಖಾಂತರ ಸಂಪರ್ಕಿಸಿ ಸರ್ವೆ ರಿಪೋರ್ಟ್ ಸಲ್ಲಿಸುವಂತೆ ಕೋರಿದರು. | ಬಿ.ಡಬ್ಲ್ಯೂ.ಎಸ್. ಎಸ್.ಬಿ ಇಲಾಖೆ |
| 9. | ಶ್ರೀ ಜಯಪಾಲ್ ರವರು ಗೌತಮನಗರದ ಒಳಚರಂಡಿಯನ್ನು ಹೊಸದಾಗಿ ನಿರ್ಮಾಣ ಮಾಡಲು ಕೋರಲಾಗಿದ್ದು, ತೆಗೆದುಕೊಂಡ ಕ್ರಮದ ಬಗ್ಗೆ ಕೋರಿದರು. ಸದರಿ ಸಭೆಯಲ್ಲಿ ಸಂಬಂಧಪಟ್ಟ ಅಧಿಕಾರಿರವರು ಹಾಜರಿರಲಿಲ್ಲ. | ಬಿ.ಡಬ್ಲ್ಯೂ.ಎಸ್. ಎಸ್.ಬಿ ಇಲಾಖೆ |
| 10. | ಶ್ರೀ ವೈ ಆರ್ ವೆಂಕಟೇಶ್ ಸದಸ್ಯರು ರವರು ಘುಡ್‌ಗೋಡೌನ್ ಸುತ್ತಮುತ್ತಲಿನ ರಸ್ತೆಗಳು ಸಿಂಕ್ ಹಾಗುತ್ತಿರುತ್ತದೆ ಎಂದು ತಿಳಿಸಿದರು. ಇದಕ್ಕೆ ಕಾರ್ಯದರ್ಶಿಗಳು ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು. | ವಾರ್ಡ್ ಅಭಿಯಂತರರು |
| 11. | ಶ್ರೀ ವೈ ಆರ್ ವೆಂಕಟೇಶ್ ಸದಸ್ಯರು ರವರು ಎಂಎಸ್‌ಜಿಪಿ ಲಾರಿಗಳನ್ನು ಉಲ್ಲಾಸ್ ಥಿಯೇಟರ್ ಹತ್ತಿರ ನಿಲ್ಲಿಸಿ ಹೋಗುತ್ತಿರುತ್ತಾರೆ ಎಂದು ತಿಳಿಸಿದರು. ಇದಕ್ಕೆ ಮಾನ್ಯ ಅಧ್ಯಕ್ಷರು ಸಂಬಂದಪಟ್ಟವರಿಗೆ ಸೂಚಿಸಲಾಗುವುದು ಎಂದು ತಿಳಿಸಿದರು. | – |
| 12. | ಶ್ರೀ ನಾಗೇಂದ್ರ ಸದಸ್ಯರು ರವರು ಬೆಸ್ಕಾಂ ಇಲಾಖೆ ರವರು ಪಾದಚಾರಿ ಮಾರ್ಗಗಳಲ್ಲಿ ಕೇಬಲ್‌ಗಳನ್ನು ಯಾವಾಗ ತೆರವುಗೊಳಿಸುತ್ತಾರೆ ಹಾಗೂ ಕಾಟವು ಕೇಬಲ್‌ಗಳಿಗೆ ಕ್ಯಾಪ್‌ಗಳನ್ನು ಸಹ ಅಳವಡಿಸುವುದಿಲ್ಲ ಎಂದು ತಿಳಿಸಿದರು. ಇದಕ್ಕೆ ಮಾನ್ಯ ಅಧ್ಯಕ್ಷರು ಬೆಸ್ಕಾಂ ಇಲಾಖೆರವರಿಗೆ ಕ್ರಮಕೈಗೊಳ್ಳಲು ಸೂಚಿಸಿದರು. | ಬೆಸ್ಕಾಂ ಇಲಾಖೆ |
| 13. | ಸದಸ್ಯರು ವಾರ್ಡ್ ವ್ಯಾಪ್ತಿಯಲ್ಲಿನ ಬ್ಯಾನರ್‌ಗಳನ್ನು ತೆರವುಗೊಳಿಸಲು ಕೋರಿದರು. ಇದಕ್ಕೆ ಕಾರ್ಯದರ್ಶಿಗಳು ಕೆಲಸ ಪರಿವೀಕ್ಷಕರಿಗೆ ಬ್ಯಾನರ್‌ಗಳನ್ನು ತೆರವುಗೊಳಿಸಲು ಸೂಚಿಸಿದರು. | ವಾರ್ಡ್ ಅಭಿಯಂತರರು |
| 14. | ಶ್ರೀ ಪುಟ್ಟಸ್ವಾಮಿ ಸದಸ್ಯರು ರವರು ಅಂತಿಮವಾಗಿ ಸಭೆಗೆ ಹಾಜರಿದ್ದ ಸದಸ್ಯರು, ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ವಂದನೆಗಳು ಹೇಳುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು. | – |

(signature)

**ಅಧ್ಯಕ್ಷರು**

ವಾರ್ಡ್ ಕಮಿಟಿ, ವಾರ್ಡ್.ಸಂಖ್ಯೆ.44

ಮಾರಪ್ಪನಪಾಳ್ಯ